## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 464 (522)

ಸದಸ್ಯರ ಹೆಸರು : ಶ್ರೀ ರಘುನಾಥ್ ರಾವ್ ಮಲ್ಕಾಪುರೆ( ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 09.03.2020

ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು ಉನ್ನತ ಶಿಕ್ಷಣ

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | 2017-18 ಮತ್ತು 2019-20ನೇ ಸಾಲಿನಲ್ಲಿ ಬೀದರ್ ಜಿಲ್ಲೆಯ ಯಾವ ಯಾವ ಸರ್ಕಾರಿ ಪದವಿ ಕಾಲೇಜುಗಳಿಗೆ ಮೂಲ ಸೌಕರ್ಯ ಕಲ್ಪಿಸಲು ಹಣ ಬಿಡುಗಡೆ ಮಾಡಲಾಗಿದೆ.(ಬಿಡುಗಡೆ ಮೊತ್ತ ಸಹಿತ ಸಂಪೂರ್ಣ ವಿವರ ನೀಡುವುದು) | ಬೀದರ್ ಜಿಲ್ಲೆಯಲ್ಲಿ 09 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿರುತ್ತವೆ. ಸದರಿ ಕಾಲೇಜುಗಳಿಗೆ 2017-18 ಮತ್ತು 2019-2020 ನೇ ಸಾಲಿನಲ್ಲಿ ಮೂಲಸೌಕರ್ಯಗಳಾದ ವಿದ್ಯುತ್, ದೂರವಾಣಿ, ಕಛೇರಿ ವೆಚ್ಚ, ಮತ್ತಿತರೆ ವೆಚ್ಚಗಳಿಗೆ ಈ ಕೆಳಕಂಡಂತೆ ಹಣ ಬಿಡುಗಡೆ ಮಾಡಲಾಗಿದೆ.(ರೂ.ಗಳಲ್ಲಿ) |

| | ಬೀದರ್ ಜಿಲ್ಲೆಯಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಹೆಸರು | 2017-18 |
|---|---|---|
| 1 | ಬೀದರ್ | 260200.00 |
| 2 | ಔರಾದ್ | 127800.00 |
| 3 | ಬಸವಕಲ್ಯಾಣ | 172400.00 |
| 4 | ಬಾಲ್ಕಿ | 137400.00 |
| 5 | ಹುಮ್ನಾಬಾದ್ | 209900.00 |
| 6 | ಚಿಟಗುಪ್ಪ | 118100.00 |
| 7 | ಮನಹಳ್ಳಿ | 72600.00 |
| 8 | ಹುಲಸೂರು | 104100.00 |
| 9 | ಮಹಿಳಾ ಕಾಲೇಜು, ಬೀದರ್ | 212000.00 |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಆ | ಬೀದರ್ ಜಿಲ್ಲೆಯಲ್ಲಿ 2017-18 ಹಾಗೂ 2019-20ನೇ ಸಾಲಿನ ಯಾವ ಯಾವ ಕಾಲೇಜುಗಳಿಗೆ ಸ್ವಂತ ಕಟ್ಟಡ ಇರುವುದಿಲ್ಲ. | ಬೀದರ್ ಜಿಲ್ಲೆಯಲ್ಲಿ 2017-18 ಹಾಗೂ 2019-20ನೇ ಸಾಲಿನ ಕಾಲೇಜುಗಳಲ್ಲಿ ಬೀದರ್ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿಗೆ ನಿವೇಶನ ಲಭ್ಯವಿಲ್ಲದ ಕಾರಣ ಸ್ವಂತ ಕಟ್ಟಡವಿರುವುದಿಲ್ಲ |

| | | |
|---|---|---|
| ಇ | ಬೀದರ್ ಜಿಲ್ಲೆಯಾದ್ಯಾಂತ ಯಾವ ಯಾವ ಪದವಿ ಕಾಲೇಜುಗಳಿಗೆ ಸ್ವಂತ ಕಟ್ಟಡ ಕಟ್ಟಲು ಅನುದಾನ ಮಂಜೂರು ಮಾಡಲಾಗಿದೆ; ಕಟ್ಟಡ ಕಾಮಗಾರಿಗಳನ್ನು ಯಾವಾಗ ಪ್ರಾರಂಭಿಸಲಾಗುವುದು? (ಸಂಪೂರ್ಣ ವಿವರ ನೀಡುವುದು) | ➢ **ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಬೀದರ್** 2019-20ನೇ ಸಾಲಿನಲ್ಲಿ ರೂಸಾ ಯೋಜನೆಯಡಿ ನೂತನ ಕಟ್ಟಡ ನಿರ್ಮಾಣ ಕಾಮಗಾರಿಗಾಗಿ (ಹೆಚ್ಚುವರಿ ಕೊಠಡಿ ನಿರ್ಮಾಣಕ್ಕೆ) ರೂ.100.00ಲಕ್ಷಗಳ ಅಂದಾಜು ಪಟ್ಟಿ ಮತ್ತು ನಕ್ಷೆಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ರೂ.60.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಕಾಮಗಾರಿಯನ್ನು ತ್ವರಿತವಾಗಿ ಪ್ರಾರಂಭಿಸಲಾಗುತಿದೆ.<br>➢ **ಹುಮ್ನಾಬಾದ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ** 2017-18ನೇ ಸಾಲಿನಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ರೂ.100.00ಲಕ್ಷಗಳ ಅನುದಾನವನ್ನು ಹೆಚ್ಚುವರಿ ತರಗತಿ ಕೊಠಡಿ ಕಟ್ಟಡ ನಿರ್ಮಾಣ ಕಾಮಗಾರಿಗಳಿಗೆ ಮಂಜೂರಾಗಿದ್ದು, ಈಗಾಗಲೇ ರೂ.70.00ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಕಾಮಗಾರಿಯು ಲಿಂಟಲ್ ಹಂತದಲ್ಲಿರುತ್ತದೆ.<br>➢ **ಚಿಟಗುಪ್ಪ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ** 2017-18ನೇ ಸಾಲಿನಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ರೂ.100.00ಲಕ್ಷಗಳ ಅನುದಾನವನ್ನು ಹೆಚ್ಚುವರಿ ತರಗತಿ ಕೊಠಡಿ ಕಟ್ಟಡ ನಿರ್ಮಾಣ ಕಾಮಗಾರಿಗಳಿಗೆ ಮಂಜೂರಾಗಿದ್ದು, ಈಗಾಗಲೇ ರೂ.63.19ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಕಾಮಗಾರಿಯು ತಳಪಾಯದ ಹಂತದಲ್ಲಿರುತ್ತದೆ.<br>**ಹುಲಸೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ** 2017-18ನೇ ಸಾಲಿನಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ರೂ.100.00ಲಕ್ಷಗಳ ಅನುದಾನವನ್ನು ಹೆಚ್ಚುವರಿ ತರಗತಿ ಕೊಠಡಿ ಕಟ್ಟಡ ನಿರ್ಮಾಣ ಕಾಮಗಾರಿಗಳಿಗೆ ಮಂಜೂರಾಗಿದ್ದು, ಈಗಾಗಲೇ ರೂ.70.00ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ ಕಾಮಗಾರಿಯು ರೂಫ್ ಲೆವೆಲ್ ಹಂತದಲ್ಲಿರುತ್ತದೆ. |

**(ಡಾ|| ಅಶ್ವಥ್ ನಾರಾಯಣ ಸಿ.ಎನ್.)**
ಉಪ ಮುಖ್ಯಮಂತ್ರಿಗಳು ಹಾಗೂ
ಉನ್ನತ ಶಿಕ್ಷಣ ಸಚಿವರು

ಇಡಿ 29 ಹೆಚ್‌ಪಿಸಿ 2020